**ಕರ್ನಾಟಕ ವಿಧಾನ ಪರಿಷತ್ತು**
**ನೂರ ಐವತ್ತೆಂಟನೆಯ ಅಧಿವೇಶನ**
**(ಮುಂದುವರೆದ ಉಪವೇಶನ)**

# ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ಶಿಕ್ಷಕರ ವರ್ಗಾವಣೆ ನಿಯಂತ್ರಣ) (ತಿದ್ದುಪಡಿ) ವಿಧೇಯಕ, 2026

**(2026ರ ವಿಧಾನಸಭೆಯ ವಿಧೇಯಕ ಸಂಖ್ಯೆ–10)**

**(ಕರ್ನಾಟಕ ವಿಧಾನಸಭೆಯಿಂದ ಅಂಗೀಕಾರವಾದ ರೂಪದಲ್ಲಿ)**

ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಅಧಿನಿಯಮ, 2020ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಅಧಿನಿಯಮ, 2020 (2020ರ ಕರ್ನಾಟಕ ಅಧಿನಿಯಮ 04)ನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತೇಳನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ಶಿಕ್ಷಕರ ವರ್ಗಾವಣೆ ನಿಯಂತ್ರಣ) (ತಿದ್ದುಪಡಿ) ಅಧಿನಿಯಮ, 2026 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. ಪ್ರಕರಣ 2ರ ತಿದ್ದುಪಡಿ.-** ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಅಧಿನಿಯಮ, 2020 (2020ರ ಕರ್ನಾಟಕ ಅಧಿನಿಯಮ 04)ರ (ಇಲ್ಲಿ ಇನ್ನುಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ), 2ನೇ ಪ್ರಕರಣದಲ್ಲಿ,-

(i) ಖಂಡ(ಸಿಎ)ಯನ್ನು (ಸಿಬಿ) ಎಂದು ಮರುಸಂಖ್ಯೆ ನೀಡತಕ್ಕದ್ದು;

(ii) ಹಾಗೆ ಮರುಸಂಖ್ಯೆ ನೀಡಲಾದ ಖಂಡ(ಸಿಬಿ)ಯ ಮೊದಲು ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ: -

"(ಸಿಎ) "ನಿರ್ಣಾಯಕ ಹುದ್ದೆಗಳು" ಎಂದರೆ ಮತ್ತು ಪದವಿ-ಪೂರ್ವ ಕಾಲೇಜಿನ ಉಪನ್ಯಾಸಕರನ್ನೊಳಗೊಂಡಂತೆ ಈ ಮುಂದಿನ ಪ್ರವರ್ಗಗಳ ಎಲ್ಲಾ ಬೋಧಕ ಹುದ್ದೆಗಳನ್ನು ಒಳಗೊಳ್ಳುವುದು, ಎಂದರೆ:-

(i) **ಪ್ರವರ್ಗ 1:** ಮುಖ್ಯೋಪಾಧ್ಯಾಯರು ಅಥವಾ ಉಪ ಪ್ರಾಂಶುಪಾಲರನ್ನು ಹೊರತುಪಡಿಸಿ ಕರ್ನಾಟಕ ಪಬ್ಲಿಕ್ ಶಾಲೆಗಳು, ಆದರ್ಶ ವಿದ್ಯಾಲಯ, ಪಿಎಂ ಶ್ರೀ ಶಾಲೆಗಳು;

(ii) **ಪ್ರವರ್ಗ 2:** ಮುಖ್ಯೋಪಾಧ್ಯಾಯರು ಅಥವಾ ಉಪ ಪ್ರಾಂಶುಪಾಲರನ್ನು ಹೊರತುಪಡಿಸಿ, 250 ವಿದ್ಯಾರ್ಥಿಗಳನ್ನು ಮೀರಿದ ಅಥವಾ ಕಾಲಕಾಲಕ್ಕೆ ಸರ್ಕಾರವು ಅಧಿಸೂಚಿಸಲಾದ ದಾಖಲಾತಿ

ಮಿತಿಯ ಪ್ರಕಾರ ದಾಖಲಾತಿಯನ್ನು ಹೊಂದಿರುವ ಎಲ್ಲಾ ಇತರ ಶಾಲೆಗಳು ಹಾಗೂ ಸರ್ಕಾರಿ ಪದವಿ-ಪೂರ್ವ ಕಾಲೇಜುಗಳು ; ಮತ್ತು

(iii) **ಪ್ರವರ್ಗ 3:** ಪ್ರವರ್ಗ 1 ಮತ್ತು 2ರಲ್ಲಿನ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರು ಅಥವಾ ಉಪ ಪ್ರಾಂಶುಪಾಲರು ಅಥವಾ ಸರ್ಕಾರಿ ಪದವಿ-ಪೂರ್ವ ಕಾಲೇಜುಗಳ ಪ್ರಾಂಶುಪಾಲರು."

(iii) (ಡಿ)ಖಂಡದ ಕೊನೆಯಲ್ಲಿ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ :-

"ಪರಂತು, ಅನುಸೂಚಿ-I ರ IIIನೇ ಕ್ರಮ ಸಂಖ್ಯೆಯಲ್ಲಿ ನಿರ್ದಿಷ್ಟ ಪಡಿಸಿದ ಹುದ್ದೆಗಳ ವರ್ಗಾವಣೆಯನ್ನು ಕೌನ್ಸಿಲಿಂಗ್‌ನ ಮೂಲಕ ಮಾತ್ರ ನಡೆಸತಕ್ಕದ್ದು, ಅದಕ್ಕಾಗಿ ಶಾಲೆಗಳು/ಕಾಲೇಜುಗಳಲ್ಲಿನ ಸ್ಥಾನಿಕ(incumbent) ಪ್ರಸ್ತುತ ವೃಂದದಲ್ಲಿ ಸಲ್ಲಿಸಿರುವ ಕನಿಷ್ಠ ಸೇವಾವಧಿಯು ಹನ್ನೆರಡು ನಿರಂತರ ವರ್ಷಗಳಾಗಿರತಕ್ಕದ್ದು:"

ಮತ್ತು ಪರಂತು ಅನುಸೂಚಿ-I ರ IIIನೇ ಕ್ರಮ ಸಂಖ್ಯೆಯಲ್ಲಿ ನಿರ್ದಿಷ್ಟ ಪಡಿಸಿದ ಹುದ್ದೆಗಳಲ್ಲಿನ ಗರಿಷ್ಠ ಸೇವಾವಧಿಯು ಮೂರು ವರ್ಷಗಳು ಮಾತ್ರ ಆಗಿರತಕ್ಕದ್ದು:

ಅಲ್ಲದೆ ಪರಂತು ಅನುಸೂಚಿ-Iರಲ್ಲಿ ಮತ್ತು 2ನೇ ಪ್ರಕರಣದ (ಎಚ್) ಖಂಡದಲ್ಲಿ ನಿರ್ದಿಷ್ಟಪಡಿಸಿದ ಬೋಧಕ ಹುದ್ದೆಗಳ ಸ್ಥಾನಿಕರನ್ನು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯಲ್ಲಿನ ಬೋಧಕೇತರ ಹುದ್ದೆಗಳಿಗೆ ಮತ್ತು ರಾಜ್ಯ ಸಿವಿಲ್ ಸೇವೆಗಳು ಅಥವಾ ಮಂಡಳಿಗಳು ಅಥವಾ ನಿಗಮಗಳಲ್ಲಿನ ಯಾವುದೇ ಇತರ ಹುದ್ದೆಗಳಿಗೆ ವರ್ಗಾವಣೆ ಮಾಡತಕ್ಕದ್ದಲ್ಲ."

**3. ಪ್ರಕರಣ 4ರ ತಿದ್ದುಪಡಿ.-** ಮೂಲ ಅಧಿನಿಯಮದ, 4ನೇ ಪ್ರಕರಣದ, (2)ನೇ ಉಪ-ಪ್ರಕರಣದ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ :-

"(3) ಈ ಪ್ರಕ್ರಿಯೆಯಡಿಯಲ್ಲಿನ ಎಲ್ಲಾ ವರ್ಗಾವಣೆಗಳು, 2ನೇ ಪ್ರಕರಣದ (ಸಿಎ) ಖಂಡದಡಿ ಪ್ರವರ್ಗೀಕರಿಸಲಾದ ನಿರ್ಣಾಯಕ ಹುದ್ದೆಗಳಿಗೆ ಮತ್ತು ಯಾವುದೇ ನಿರ್ಣಾಯಕ ಹುದ್ದೆಗಳು ಲಭ್ಯವಿಲ್ಲದಿದ್ದರೆ, ಸರ್ಕಾರವು ಅಧಿಸೂಚಿಸಬಹುದಾದ ಇತರ ಹುದ್ದೆಗಳಿಗೆ ವರ್ಗಾವಣೆಗೊಳ್ಳತಕ್ಕದ್ದು."

**4. ಪ್ರಕರಣ 5ರ ತಿದ್ದುಪಡಿ.-** ಮೂಲ ಅಧಿನಿಯಮದ, 5ನೇ ಪ್ರಕರಣದ, (iii)ನೇ ಖಂಡದ ಬದಲಿಗೆ, ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ :-

"(iii) ಈ ಪ್ರಕ್ರಿಯೆಯಡಿಯಲ್ಲಿನ ಎಲ್ಲಾ ವರ್ಗಾವಣೆಗಳು, 2ನೇ ಪ್ರಕರಣದ (ಸಿಎ) ಖಂಡದಡಿ ಪ್ರವರ್ಗೀಕರಿಸಲಾದ ನಿರ್ಣಾಯಕ ಹುದ್ದೆಗಳಿಗೆ ಮತ್ತು ಯಾವುದೇ ನಿರ್ಣಾಯಕ ಹುದ್ದೆಗಳು ಲಭ್ಯವಿಲ್ಲದಿದ್ದರೆ, ಸರ್ಕಾರವು ಅಧಿಸೂಚಿಸಬಹುದಾದ ಇತರ ಹುದ್ದೆಗಳಿಗೆ ವರ್ಗಾವಣೆಗೊಳ್ಳತಕ್ಕದ್ದು."

**5. ಪ್ರಕರಣ 6ರ ಪ್ರತಿಯೋಜನೆ.-** ಮೂಲ ಅಧಿನಿಯಮದ, 6ನೇ ಪ್ರಕರಣದ ಬದಲಿಗೆ, ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ :-

"**6. ಕೋರಿಕೆ ವರ್ಗಾವಣೆ.-** ಒಂದು ಶಾಲೆಯಲ್ಲಿ ಅಥವಾ ಪದವಿ-ಪೂರ್ವ ಕಾಲೇಜಿನಲ್ಲಿ ಕನಿಷ್ಠ ಸೇವಾವಧಿಯನ್ನು ಸಲ್ಲಿಸಿರುವ ಶಿಕ್ಷಕ ಅಥವಾ ಉಪನ್ಯಾಸಕನಿಗೆ, ವರ್ಗಾವಣೆಗಾಗಿ ಲಭ್ಯವಿರುವ ನಿರ್ಣಾಯಕ ಹುದ್ದೆ ಮತ್ತು ನಿಯಮಿಸಬಹುದಾದಂಥ ಇತರ ಷರತ್ತುಗಳಿಗೆ ಒಳಪಟ್ಟು ವರ್ಗಾವಣೆಯನ್ನು ಕೋರಲು ಆಯ್ಕೆಯನ್ನು ನೀಡತಕ್ಕದ್ದು:

ಪರಂತು, ಕಲ್ಯಾಣ ಕರ್ನಾಟಕ ಪ್ರದೇಶದ ಯಾವುದೇ ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುವ ಶಿಕ್ಷಕ ಅಥವಾ ಉಪನ್ಯಾಸಕರು, ಕಲ್ಯಾಣ ಕರ್ನಾಟಕ ಪ್ರದೇಶದ ಹೊರಗೆ, ವರ್ಗಾವಣೆ ಕೋರಿಕೆಗಾಗಿ ಇತರ ಎಲ್ಲಾ ಅರ್ಹತಾ ಷರತ್ತುಗಳ ಜೊತೆಗೆ, ಆ ಪ್ರದೇಶದಲ್ಲಿ ಕನಿಷ್ಠ ಹತ್ತು ವರ್ಷಗಳ ಸೇವೆಯನ್ನೂ ಸಹ ಪೂರ್ಣಗೊಳಿಸಿರತಕ್ಕದ್ದು."

**6. ಪ್ರಕರಣ 10ರ ತಿದ್ದುಪಡಿ.-** ಮೂಲ ಅಧಿನಿಯಮದ, 10ನೇ ಪ್ರಕರಣದಲ್ಲಿ,-

(i) ಉಪ-ಪ್ರಕರಣ (1)ರಲ್ಲಿ,-

(ಎ) ಖಂಡ (ii)ರ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(ii-ಎ) ಗರ್ಭಿಣಿ ಶಿಕ್ಷಕಿ ಅಥವಾ ಐದು ವರ್ಷಗಳಿಗಿಂತ ಕಡಿಮೆಯಲ್ಲದ ವಯಸ್ಸಿನ ಮಗುವನ್ನು ಹೊಂದಿರುವ ಮಹಿಳಾ ಶಿಕ್ಷಕಿ:

ಪರಂತು ಸದರಿ ಉಪಬಂಧವು ಪ್ರಸೂತಿ ರಜೆಯಿಂದ ಹಿಂದಿರುಗಿದ ನಂತರ ಶಿಕ್ಷಕರು ಕರ್ತವ್ಯಕ್ಕೆ ಮರಳುವ ವರ್ಷದಲ್ಲಿ ಕೈಗೊಳ್ಳುವ ಶಿಕ್ಷಕರ ಸಾಮಾನ್ಯ ವರ್ಗಾವಣೆಗೆ ಮಾತ್ರ ಅನ್ವಯವಾಗತಕ್ಕದ್ದು."

(ಬಿ) ಖಂಡ (vii)ನ್ನು ಬಿಟ್ಟುಬಿಡತಕ್ಕದ್ದು.

(ii) ಉಪ-ಪ್ರಕರಣ (4)ರಲ್ಲಿನ "ಮತ್ತು (vii)ನೇ" ಎಂಬ ಪದ, ಆವರಣಗಳು ಮತ್ತು ಅಂಕಿಗಳನ್ನು ಬಿಟ್ಟುಬಿಡತಕ್ಕದ್ದು.

**7. ಅನುಸೂಚಿಯ ತಿದ್ದುಪಡಿ.-** ಮೂಲ ಅಧಿನಿಯಮದ, ಅನುಸೂಚಿ-Iರಲ್ಲಿನ, ಕ್ರಮಸಂಖ್ಯೆ-II ಮತ್ತು ಅದಕ್ಕೆ ಸಂಬಂಧಿಸಿದ ನಮೂದುಗಳ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"

| | |
|---|---|
| III | ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (DIET)/ ಶಿಕ್ಷಕರ ತರಬೇತಿ ಸಂಸ್ಥೆಗಳು (TTI) / ಶಿಕ್ಷಕರ ಕಲಿಕಾ ಕಾಲೇಜುಗಳಲ್ಲಿನ (CTE) / ರಾಜ್ಯ, ವಿಭಾಗೀಯ ಮತ್ತು ಜಿಲ್ಲಾ ಮಟ್ಟದ ಆಡಳಿತ ಕಛೇರಿಗಳು ಎಂದರೆ, ಶಾಲಾ ಶಿಕ್ಷಣ ಆಯುಕ್ತರ ಕಛೇರಿ/ ಹೆಚ್ಚುವರಿ ಶಾಲಾ ಶಿಕ್ಷಣ ಆಯುಕ್ತರ ಕಛೇರಿ/ ಡಿಎಸ್‌ಇಆರ್‌ಟಿ/ ಕೆಎಸ್‌ಇಎಬಿ/ಎಸ್‌ಎಸ್‌ಕೆ/ಕೆಟಿಬಿಎಸ್/ಡಿಡಿಪಿಐ-ಗಳಲ್ಲಿನ ಬೋಧಕ ಹುದ್ದೆಗಳು |
| 1 | ಉಪನ್ಯಾಸಕ |
| 2 | ಉಪನ್ಯಾಸಕ (ಕರಕುಶಲ) |
| 3 | ಉಪನ್ಯಾಸಕ (ದೈಹಿಕ ಶಿಕ್ಷಣ) |
| 4 | ಕಿರಿಯ ಪ್ರೋಗ್ರಾಮ್ ಅಧಿಕಾರಿ (Junior Program Officer) |
| 5 | ಸಹಾಯಕ ನಿರ್ದೇಶಕ (ಬೋಧನೆ) |
| 6 | ಉಪನ್ಯಾಸಕ (ಕಾರ್ಯಾನುಭವ) |
| 7 | ವಿಶೇಷ ತನಿಖಾಧಿಕಾರಿ (ವೃತ್ತಿ ಶಿಕ್ಷಣ) |
| 8 | ಉಪನ್ಯಾಸಕ (ಚಿತ್ರಕಲೆ) |

"

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ
## (ವಿಧೇಯಕವನ್ನು ಮಂಡಿಸುವಾಗ ಲಗತ್ತಿಸಿದಂತೆ)

ಈ ಮುಂದಿನವುಗಳಿಗಾಗಿ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಅಧಿನಿಯಮ, 2020 (2020ರ ಕರ್ನಾಟಕ ಅಧಿನಿಯಮ 04)ನ್ನು,-

(i) ನಿರ್ಣಾಯಕ ಹುದ್ದೆಗಳನ್ನು ಪರಿಭಾಷಿಸಲು;

(ii) ಅನುಸೂಚಿ-Iರ ಕ್ರಮ ಸಂಖ್ಯೆ IIIರಲ್ಲಿನ ಹುದ್ದೆಗಳಿಗೆ ಕೌನ್ಸಿಲಿಂಗ್ ಮೂಲಕ ವರ್ಗಾವಣೆಗಾಗಿ ಉಪಬಂಧವನ್ನು ಕಲ್ಪಿಸಲು;

(iii) ಸದರಿ ಹುದ್ದೆಗಳಿಗೆ ಗರಿಷ್ಠ ಸೇವಾವಧಿಯನ್ನು ನಿರ್ದಿಷ್ಟಪಡಿಸಲು;

(iv) ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯಲ್ಲಿನ ಬೋಧಕೇತರ ಹುದ್ದೆಗಳಿಗೆ ಮತ್ತು ರಾಜ್ಯ ಸಿವಿಲ್ ಸೇವೆಗಳು ಅಥವಾ ಮಂಡಳಿಗಳು ಅಥವಾ ನಿಗಮಗಳಲ್ಲಿನ ಯಾವುದೇ ಇತರ ಹುದ್ದೆಗಳಿಗೆ ಅನುಸೂಚಿ-Iರಲ್ಲಿ ಮತ್ತು 2ನೇ ಪ್ರಕರಣದ (ಎಚ್) ಖಂಡದಲ್ಲಿ ನಿರ್ದಿಷ್ಟಪಡಿಸಿದ ಬೋಧಕ ಹುದ್ದೆಗಳ ಸ್ಥಾನಿಕರ ವರ್ಗಾವಣೆಯನ್ನು ಪ್ರತಿಷೇಧಿಸುವ ಉಪಬಂಧವನ್ನು ಕಲ್ಪಿಸಲು,

(v) ಕೆಲವು ಇತರ ಆನುಷಂಗಿಕ ತಿದ್ದುಪಡಿಗಳನ್ನು ಮಾಡಲು,

- ಮತ್ತಷ್ಟು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

## **ಆರ್ಥಿಕ ಜ್ಞಾಪನ ಪತ್ರ**

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

**ಪ್ರತ್ಯಾಯೋಜಿತ ಶಾಸನ ರಚನಾಧಿಕಾರ ಕುರಿತು ಜ್ಞಾಪನ ಪತ್ರ**

| | |
|---|---|
| **ಖಂಡ 5**: | 5ನೇ ಖಂಡವು, ಕೋರಿಕೆ ವರ್ಗಾವಣೆಗಾಗಿ ಷರತ್ತುಗಳನ್ನು ನಿರ್ದಿಷ್ಟಪಡಿಸುವುದಕ್ಕೆ ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ. |

ಪ್ರಸ್ತಾವಿತ ಶಾಸನ ರಚನಾಧಿಕಾರದ ಪ್ರತ್ಯಾಯೋಜನೆಯು ವಾಡಿಕೆಯ ಸ್ವರೂಪದ್ದಾಗಿದೆ.

**ಎಸ್. ಮಧು ಬಂಗಾರಪ್ಪ**
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಮಂತ್ರಿ

**ಕೆ.ಆರ್. ಮಹಾಲಕ್ಷ್ಮಿ**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

**ಅನುಬಂಧ**

**ಕರ್ನಾಟಕ ಸಿವಿಲ್ ಸೇವೆಗಳು (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಅಧಿನಿಯಮ, 202೦**

**(2020ರ ಕರ್ನಾಟಕ ಅಧಿನಿಯಮ ಸಂಖ್ಯೆ 4) ಉದ್ಧೃತ ಭಾಗ**

**XXX XXX XXX**

**2. ಪರಿಭಾಷೆಗಳು.-** ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು.-

(ಎ) **"ನೇಮಕಾತಿ"** ಎಂದರೆ, ನೇರ ನೇಮಕಾತಿ, ವಿಲೀನಗೊಳಿಸುವಿಕೆ ಅಥವಾ ಮುಂಬಡ್ತಿಯ ಮೂಲಕ ನೇಮಕಾತಿ;

(ಬಿ) **"ನೇಮಕಾತಿ ಪ್ರಾಧಿಕಾರ"** ಎಂದರೆ, ಶಿಕ್ಷಕನ ಹುದ್ದೆಗೆ ನೇಮಕ ಮಾಡಲು ಸಕ್ಷಮವಾದ ಪ್ರಾಧಿಕಾರ;

(ಸಿ) **"ಸಕ್ಷಮ ಪ್ರಾಧಿಕಾರ"** ಎಂದರೆ, ನಿಯಮಿಸಬಹುದಾದಂತೆ ಶಿಕ್ಷಕರ ವರ್ಗಾವಣೆ ಆದೇಶವನ್ನು ಮಾಡಲು ಸಕ್ಷಮವಾದ ಪ್ರಾಧಿಕಾರ;

(ಸಿ-ಎ) **"ಉಪನ್ಯಾಸಕ"** ಎಂದರೆ ಅನುಸೂಚಿ-IIರಲ್ಲಿ ನಿರ್ದಿಷ್ಟಪಡಿಸಿದಂತೆ ಸಂಯುಕ್ತ ಜೂನಿಯರ್ ಕಾಲೇಜಿನಲ್ಲಿ ಅಥವಾ ಪದವಿ-ಪೂರ್ವ ಕಾಲೇಜಿನಲ್ಲಿ ಪ್ರಾಂಶುಪಾಲ ಅಥವಾ ಉಪನ್ಯಾಸಕ ಹುದ್ದೆಗಳ ಪ್ರವರ್ಗಕ್ಕೆ ನೇಮಿಸಲಾದ ವ್ಯಕ್ತಿ;

(ಡಿ) **"ಕನಿಷ್ಠ ಸೇವಾ ಅವಧಿ"** ಎಂದರೆ ಪ್ರಕರಣ 2ರ (ಎಫ್) ಖಂಡದ ಹಾಗೂ ಪ್ರಕರಣ 4ರ ಉಪಬಂಧಗಳಿಗನುಸಾರವಾಗಿ ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ಶಿಕ್ಷಕರನ್ನು ಅಥವಾ ಉಪನ್ಯಾಸಕರನ್ನು ಮರುನಿಯೋಜನೆ ಮಾಡಲಾಗಿದ್ದಲ್ಲಿ ಅಲ್ಲಿಂದ ಶಾಲೆಯ ಅಥವಾ ಪದವಿಪೂರ್ವ ಕಾಲೇಜಿನಲ್ಲಿ ಸಲ್ಲಿಸಿದ ಸೇವೆಯನ್ನು ಒಳಗೊಂಡಂತೆ ಶಾಲೆ ಅಥವಾ ಪದವಿ ಪೂರ್ವ ಕಾಲೇಜುಗಳಲ್ಲಿ ಸಲ್ಲಿಸಿದ ನಿರಂತರ ಮೂರು ವರ್ಷಗಳ ಸೇವೆ.

**XXX XXX XXX**

**4. ಶಿಕ್ಷಕರ ಸಮರ್ಪಕ ಮರುಹಂಚಿಕೆ (rationalisation).-** (1) ಪ್ರತಿ ಪರ್ಯಾಯ (alternate) ವರ್ಷವೂ ಮಂಜೂರಾದ ಹುದ್ದೆಗಳು ಮತ್ತು ಅದರಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರನ್ನುಅಥವಾ ಉಪನ್ಯಾಸಕರನ್ನು, ರಾಜ್ಯ ಸರ್ಕಾರವು ಕಾಲ-ಕಾಲಕ್ಕೆ ನಿಗದಿಪಡಿಸಿದ ಶಿಷ್ಯ-ಶಿಕ್ಷಕ ಅನುಪಾತದ ಅಥವಾ ವಿದ್ಯಾರ್ಥಿ-ಉಪನ್ಯಾಸಕ ಅನುಪಾತದ ಆಧಾರದ ಮೇಲೆ ಸಮರ್ಪಕವಾಗಿ ಮರುಹಂಚಿಕೆ ಮಾಡತಕ್ಕದ್ದು.

(2) ಸಮರ್ಪಕ ಮರುಹಂಚಿಕೆ ಮಾಡಿದ ತರುವಾಯ ಯಾವುದೇ ಶಾಲೆ ಅಥವಾ ಪದವಿ- ಪೂರ್ವ ಕಾಲೇಜಿನಲ್ಲಿ ಶಿಕ್ಷಕನ ಅಥವಾ ಉಪನ್ಯಾಸಕರ ಹೆಚ್ಚುವರಿ ಹುದ್ದೆಗಳನ್ನು ಅದು ಕೊರತೆ ಇರುವ ಯಾವುದೇ ಶಾಲೆ ಅಥವಾ ಪದವಿ- ಪೂರ್ವ ಕಾಲೇಜಿಗೆ ಮರು ನಿಯೋಜನೆಮಾಡತಕ್ಕದ್ದು. ಹಾಗೆ ನಿರ್ಧರಿಸಲಾದ ಹೆಚ್ಚುವರಿ ಶಿಕ್ಷಕರನ್ನು, ನಿಯಮಿಸಬಹುದಾದ ಅಂಥ ಇತರ ಷರತ್ತುಗಳಿಗೆ ಒಳಪಟ್ಟು, ಆದ್ಯತೆಯ ಕ್ರಮದ ಆಧಾರದ ಮೇಲೆಗೆ ಕೌನ್ಸಿಲಿಂಗ್ ಮೂಲಕ ವರ್ಗಾವಣೆ ಮಾಡತಕ್ಕದ್ದು.

**XXX XXX XXX**

**5. ವಲಯವಾರು ವರ್ಗಾವಣೆಗಳು.-** ಪ್ರತಿ ಪರ್ಯಾಯ ವರ್ಷದಲ್ಲಿ,-

(i) ವಲಯ-ಸಿ ನಲ್ಲಿ ಕನಿಷ್ಠ ಹತ್ತು ವರ್ಷಗಳ ಸೇವೆಯನ್ನು ಸಲ್ಲಿಸಿಲ್ಲದ ಮತ್ತು ವಲಯ-ಎ ನಲ್ಲಿ ನಿರಂತರವಾಗಿ ಹತ್ತು ವರ್ಷಗಳಿಗೂ ಹೆಚ್ಚಿನ ಸೇವೆಯನ್ನು ಸಲ್ಲಿಸಿರುವ ಪ್ರತಿಯೊಬ್ಬ ಶಿಕ್ಷಕನನ್ನು, ರಾಜ್ಯ ಸರ್ಕಾರವು ನಿಯಮಿಸಬಹುದಾದ ಅಂಥ ಷರತ್ತುಗಳಿಗೆ ಒಳಪಟ್ಟು ವಲಯ-ಸಿ ಅಥವಾ ವಲಯ-ಬಿ ಗೆ ವರ್ಗಾವಣೆ ಮಾಡತಕ್ಕದ್ದು.

(ii) (i)ನೇ ಉಪಖಂಡದ ಅಡಿಯಲ್ಲಿ ವಲಯ-ಸಿಗೆ ವರ್ಗಾವಣೆಗೊಂಡ ಶಿಕ್ಷಕನ ಸ್ಥಳ ನಿಯುಕ್ತಿಗಾಗಿ ಯಾವುದೇ ಖಾಲಿ ಹುದ್ದೆಯು ಲಭ್ಯವಿಲ್ಲದಿದ್ದಲ್ಲಿ, ವಲಯ-ಸಿ ಅಥವಾ ವಲಯ-ಬಿ ನಲ್ಲಿ ಕನಿಷ್ಠ ಸೇವಾವಧಿಯನ್ನು ಪೂರೈಸಿರುವ ಸಮ್ಮತಿಸಿರುವ ಶಿಕ್ಷಕರನ್ನು ಆದ್ಯತೆಯ ಕ್ರಮದಲ್ಲಿ ವಲಯ-ಎ ಗೆ ವರ್ಗಾವಣೆ ಮಾಡುವುದರ ಮೂಲಕ ಖಾಲಿ ಹುದ್ದೆಯನ್ನು ಸೃಜನೆ ಮಾಡಬಹುದು.

(iii) ಪದವಿ-ಪೂರ್ವ ಶಿಕ್ಷಣ ಇಲಾಖೆಗೆ ರಾಜ್ಯವು ಏಕ ಘಟಕವಾಗಿರುವುದರಿಂದ, ಸರ್ಕಾರಿ ಪದವಿ-ಪೂರ್ವ ಕಾಲೇಜು ಅಥವಾ ಸಂಯುಕ್ತ ಜೂನಿಯರ್ ಕಾಲೇಜಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಉಪನ್ಯಾಸಕರಿಗೆ ವಲಯ ವರ್ಗಾವಣೆಯು ಅನ್ವಯಿಸುವುದಿಲ್ಲ.

**XXX XXX XXX**

**6. ಕೋರಿಕೆಯ ವರ್ಗಾವಣೆ.-** ಒಂದು ಶಾಲೆ ಅಥವಾ ಪದವಿ-ಪೂರ್ವ ಕಾಲೇಜಿನಲ್ಲಿ ಕನಿಷ್ಠ ಸೇವಾ ಅವಧಿಯನ್ನು ಸಲ್ಲಿಸಿರುವ ಶಿಕ್ಷಕನಿಗೆ, ಖಾಲಿ ಹುದ್ದೆಗಳ ಲಭ್ಯತೆಗೆ ಮತ್ತು ನಿಯಮಿಸ ಬಹುದಾದ ಅಂಥ ಇತರ ಷರತ್ತುಗಳಿಗೆ ಒಳಪಟ್ಟು ವರ್ಗಾವಣೆಯನ್ನು ಕೋರುವ ಆಯ್ಕೆಯನ್ನು ನೀಡತಕ್ಕದ್ದು:

ಪರಂತು, ಸಮರ್ಪಕ ಮರುಹಂಚಿಕೆ ಅಥವಾ ವಲಯವಾರು ವರ್ಗಾವಣೆಯ ಪರಿಣಾಮವಾಗಿ ಒಂದು ಶಾಲೆ ಅಥವಾ ಪದವಿ- ಪೂರ್ವ ಕಾಲೇಜಿನಿಂದ ಮತ್ತೊಂದಕ್ಕೆ ಶಿಕ್ಷಕನ ವರ್ಗಾವಣೆಯಾದ ಪ್ರಕರಣದಲ್ಲಿ, ಒಂದು ಶಾಲೆ ಅಥವಾ ಪದವಿ- ಪೂರ್ವ ಕಾಲೇಜಿನಲ್ಲಿ ಕನಿಷ್ಠ ಸೇವೆಯನ್ನು ಲೆಕ್ಕಹಾಕುವ ಉದ್ದೇಶಕ್ಕಾಗಿ ಹಿಂದಿನ ಶಾಲೆ ಅಥವಾ ಪದವಿ- ಪೂರ್ವ ಕಾಲೇಜಿನಲ್ಲಿ ಸಲ್ಲಿಸಿದ ಸೇವೆಯನ್ನು ಪರಿಗಣಿಸತಕ್ಕದ್ದು:

ಮತ್ತು ಪರಂತು, ಕಲ್ಯಾಣ ಕರ್ನಾಟಕ ಪ್ರದೇಶದ ಯಾವುದೇ ಆರು ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕನು, ಕಲ್ಯಾಣ ಕರ್ನಾಟಕ ಪ್ರದೇಶದ ಹೊರಗೆ ವರ್ಗಾವಣೆಯನ್ನು ಕೋರುವುದಕ್ಕಾಗಿ, ಎಲ್ಲಾ ಇತರ ಅರ್ಹತಾ ಷರತ್ತುಗಳ ಜೊತೆಗೆ ಆ ಪ್ರದೇಶದಲ್ಲಿ ಕನಿಷ್ಠ ಹತ್ತು ವರ್ಷಗಳ ಸೇವೆಯನ್ನೂ ಕೂಡ ಪೂರೈಸಿರತಕ್ಕದ್ದು.

**XXX XXX XXX**

**10. ಸಮರ್ಪಕ ಮರುಹಂಚಿಕೆ; ವಲಯವಾರು ವರ್ಗಾವಣೆಗಳಿಂದ ವಿನಾಯಿತಿಗಳು ಮತ್ತು ಕೋರಿಕೆ ವರ್ಗಾವಣೆಗಳಿಗೆ ಆದ್ಯತೆ.-** (1) ಸಮರ್ಪಕ ಮರುಹಂಚಿಕೆ; ವಲಯವಾರು ವರ್ಗಾವಣೆಗಳಿಂದ ವಿನಾಯಿತಿಗಳು ಮತ್ತು ಕೋರಿಕೆ ವರ್ಗಾವಣೆಗಳಿಗೆ ಆದ್ಯತೆಯು (2) ರಿಂದ (5)ನೇ ಉಪಪ್ರಕರಣಗಳಲ್ಲಿ ನಿರ್ದಿಷ್ಟಪಡಿಸಿದ ಷರತ್ತುಗಳಿಗೆ ಒಳಪಟ್ಟು ಈ ಮುಂದಿನಂತಿದೆ,-

(i) ಶಿಕ್ಷಕ ಅಥವಾ ಆತನ ಪತ್ನಿ ಅಥವಾ ಆಕೆಯ ಪತಿ (spouse) ಅಥವಾ ಮಕ್ಕಳು, ಶಿಕ್ಷಕನು ಕಾರ್ಯನಿರ್ವಹಿಸುತ್ತಿರುವ ತಾಲ್ಲೂಕಿನೊಳಗೆ ಚಿಕಿತ್ಸೆಯು ಲಭ್ಯವಿಲ್ಲದ ಕೊನೆಯ ಹಂತದ (terminal) ಖಾಯಿಲೆ ಅಥವಾ ತೀವ್ರ ಅನಾರೋಗ್ಯದಿಂದ ಬಳಲುತ್ತಿದ್ದಲ್ಲಿ;

(ii) ಅಂಗ ವೈಕಲ್ಯಗಳುಳ್ಳ ವ್ಯಕ್ತಿಗಳ ಹಕ್ಕುಗಳ ಅಧಿನಿಯಮ, 2016ರ (2016ರ ಕೇಂದ್ರ ಅಧಿನಿಯಮ 49) 2ನೇ ಪ್ರಕರಣದ (ಆರ್) ಖಂಡದಲ್ಲಿ ಪರಿಭಾಷಿಸಿದಂತೆ ಗುರುತಿಸಿದ ಮಟ್ಟದ ಅಂಗವೈಕಲ್ಯದ (Bench mark disability) ಶಿಕ್ಷಕ ಅಥವಾ ಆತನ ಪತ್ನಿ ಅಥವಾ ಆಕೆಯ ಪತಿ (Spouse) ಅಥವಾ ಮಕ್ಕಳು;

(iii) 12 ವರ್ಷಗಳ ಒಳಗಿನ ಅವಲಂಬಿತ ಮಕ್ಕಳನ್ನು ಹೊಂದಿರುವ ವಿಧವೆ ಅಥವಾ ವಿಧುರ ಅಥವಾ ವಿಚ್ಛೇದಿತ ಶಿಕ್ಷಕ;

(iv) ಭಾರತೀಯ ರಕ್ಷಣಾ ದಳಗಳು ಅಥವಾ ಅರೆ ಮಿಲಿಟರಿ ದಳಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸೈನಿಕ ಅಥವಾ ನಿವೃತ್ತಿ ಹೊಂದಿದ ಅಥವಾ ಶಾಶ್ವತವಾಗಿ ಅಂಗವಿಕಲರಾದ ಅಥವಾ ಮೃತ ಸೈನಿಕರ ಪತಿ ಅಥವಾ ಪತ್ನಿಯಾಗಿರುವ (Spouse) ಶಿಕ್ಷಕ;

(v) ರಾಜ್ಯ ಅಥವಾ ಕೇಂದ್ರ ಸರ್ಕಾರ ಅಥವಾ ಅನುದಾನಿತ ಶೈಕ್ಷಣಿಕ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವವರ ಪತಿ ಅಥವಾ ಪತ್ನಿಯಾಗಿರುವ (Spouse) ಶಿಕ್ಷಕ;

(vi) ಮಹಿಳಾ ಶಿಕ್ಷಕರ ಸಂದರ್ಭದಲ್ಲಿ ಐವತ್ತು ವರ್ಷಗಳು ಮತ್ತು ಪುರುಷ ಶಿಕ್ಷಕರ ಸಂದರ್ಭದಲ್ಲಿ ಐವತ್ತೈದು ವರ್ಷಗಳನ್ನು ಮೀರಿದ ಶಿಕ್ಷಕರು;

(vii) ಗರ್ಭಿಣಿ ಶಿಕ್ಷಕಿ ಅಥವಾ ಒಂದು ವರ್ಷದ ಒಳಗಿನ ಮಗುವನ್ನು ಹೊಂದಿರುವ ಮಹಿಳಾ ಶಿಕ್ಷಕಿ.

(2) ಉಪಪ್ರಕರಣ (1)ರ ಖಂಡ (i)ಯಿಂದ (iv)ವರೆಗಿನ ಖಂಡಗಳ ಅಡಿಯಲ್ಲಿ ಬರುವ ಪ್ರವರ್ಗಗಳು,-

(ಎ) ಸಮರ್ಪಕ ಮರುಹಂಚಿಕೆ ಅಡಿಯಲ್ಲಿ ವಿನಾಯಿತಿ.

(ಬಿ) ವಲಯ ವರ್ಗಾವಣೆ ಅಡಿಯಲ್ಲಿ ವಿನಾಯಿತಿ.

(ಸಿ) ಕೋರಿಕೆ ವರ್ಗಾವಣೆಗಳ ಅಡಿಯಲ್ಲಿ ಆದ್ಯತೆ.

(ಶಿಕ್ಷಕನು ಸೇವಾ ಅವಧಿಯಲ್ಲಿ ಒಂದು ಬಾರಿ ಮಾತ್ರ ಆದ್ಯತೆಯನ್ನು ಕ್ಲೇಮು ಮಾಡತಕ್ಕದ್ದು).

(ಡಿ) ನಿರ್ದಿಷ್ಟ ಹುದ್ದೆಗಳಿಗಾಗಿ ನಿರ್ದಿಷ್ಟಪಡಿಸಲಾದ ಲಿಖಿತ ಪರೀಕ್ಷೆಯನ್ನು ಯಶಸ್ವಿಯಾಗಿ ಉತ್ತೀರ್ಣರಾಗುವ ಮೂಲಕ ವರ್ಗಾವಣೆ ಪಡೆದ ಅಂತಹ ನಿರ್ದಿಷ್ಟ ಹುದ್ದೆಯಿಂದ ಅವರು ಹಿಮ್ಮುಖ ವರ್ಗಾವಣೆಯನ್ನು (transferred back) ಪಡೆಯುವಾಗ ಆದ್ಯತೆ

-ಇವುಗಳಿಗಾಗಿ ಅರ್ಹವಾಗಿರುತ್ತವೆ.

(3) (i) ರಿಂದ (iv)ನೇ ಖಂಡಗಳ ಅಡಿಯಲ್ಲಿ ಬರುವ ಪ್ರವರ್ಗಗಳನ್ನು ವಿಶೇಷ ಪ್ರವರ್ಗಗಳೆಂದು ವರ್ಗೀಕರಿಸಲಾಗಿದೆ. ಈ ಪ್ರವರ್ಗಗಳ ಅಡಿಯಲ್ಲಿ ಮಾಡಲಾದ ವರ್ಗಾವಣೆಗಳನ್ನು 7ನೇ ಪ್ರಕರಣದ ಅಡಿಯಲ್ಲಿ ನಿರ್ದಿಷ್ಟಪಡಿಸಿದ ಶೇಕಡಾ ಹದಿನೈದರ ಮತ್ತು ಪದವಿ-ಪೂರ್ವ ಕಾಲೇಜಿನಲ್ಲಿ ಕಾರ್ಯನಿರ್ವಹಿಸುತ್ತಿರುವ

ಉಪನ್ಯಾಸಕರ ಸಂದರ್ಭದಲ್ಲಿ (ಸಂಬಂಧಿತ ವಿಷಯದಲ್ಲಿ ಸಂಬಂಧಪಟ್ಟ ಉಪನ್ಯಾಸಕರ ವರ್ಗದ ಕಾರ್ಯಬಲದ) ಶೇಕಡ ಹತ್ತರಷ್ಟಂತೆ ವರ್ಗಾವಣೆ ಮಿತಿಗಳ ಅಡಿಯಲ್ಲಿ ಲೆಕ್ಕ ಹಾಕತಕ್ಕದ್ದಲ್ಲ.

(4) (vi) ಮತ್ತು (vii)ನೇ ಖಂಡಗಳ ಅಡಿಯಲ್ಲಿ ಬರುವ ಪ್ರವರ್ಗಗಳು ಸಮರ್ಪಕ ಮರುಹಂಚಿಕೆ ಮತ್ತು ವಲಯವಾರು ವರ್ಗಾವಣೆಗಳ ಅಡಿಯಲ್ಲಿನ ವಿನಾಯತಿಗಳಿಗೆ ಮಾತ್ರವೇ ಅರ್ಹರಾಗತಕ್ಕದ್ದು.

(5) ಉಪಪ್ರಕರಣ (1)ರ ಖಂಡ (v)ರಡಿಯಲ್ಲಿ ಬರುವ ಶಿಕ್ಷಕರನ್ನು ಕೋರಿಕೆ ವರ್ಗಾವಣೆ ಅವಧಿಯಲ್ಲಿ ಆದ್ಯತೆ ನೀಡತಕ್ಕದ್ದು. ಶಿಕ್ಷಕನು ಆತನ ಪತ್ನಿ ಅಥವಾ ಆಕೆಯ ಪತಿಯು ಬೇರೆಬೇರೆ ತಾಲ್ಲೂಕಿನಲ್ಲಿ ಕಾರ್ಯನಿರ್ವಹಿಸುತ್ತಿದ್ದರೆ, ಆ ಜಿಲ್ಲೆಯ ಯಾವುದೇ ತಾಲ್ಲೂಕಿನಲ್ಲಿ ಲಭ್ಯವಿರುವ ಖಾಲಿ ಸ್ಥಾನಕ್ಕೆ ವರ್ಗಾವಣೆ ಕೋರಲು ಅನುಮತಿಸತಕ್ಕದ್ದು. ಇಬ್ಬರೂ ಅದೇ ತಾಲ್ಲೂಕಿನಲ್ಲಿ ಕಾರ್ಯನಿರ್ವಹಿಸುತ್ತಿದ್ದರೆ, ಆಗ ಆದ್ಯತೆಯ ಅಡಿಯಲ್ಲಿ ಅರ್ಜಿಯನ್ನು ಸಲ್ಲಿಸಲು ಅವರು ಅರ್ಹರಾಗತಕ್ಕದ್ದಲ್ಲ.

(6) ಉಪಪ್ರಕರಣ (1)ರ ಖಂಡ (v)ರ ಅಡಿಯಲ್ಲಿ ಅರ್ಹ ಶಿಕ್ಷಕರು ಕೋರಿಕೆ ವರ್ಗಾವಣೆಗಾಗಿ ಅಥವಾ ನಿರ್ದಿಷ್ಟ ಹುದ್ದೆಗಳಿಗಾಗಿ ನಿರ್ದಿಷ್ಟಪಡಿಸಲಾದ ಲಿಖಿತ ಪರೀಕ್ಷೆಯನ್ನು ಯಶಸ್ವಿಯಾಗಿ ಉತ್ತೀರ್ಣರಾಗುವ ಮೂಲಕ ವರ್ಗಾವಣೆ ಪಡೆದ ಅಂತಹ ನಿರ್ದಿಷ್ಟ ಹುದ್ದೆಯಿಂದ ಹಿಮ್ಮುಖ ವರ್ಗಾವಣೆಯನ್ನು ಪಡೆಯುವಾಗ ಆದ್ಯತಾ ಕ್ರಮಕ್ಕನುಸಾರವಾಗಿ ಆದ್ಯತೆಯನ್ನು ನೀಡಲಾಗುವುದು.

(7) ಕಡ್ಡಾಯ ವರ್ಗಾವಣೆಯ ಮೇಲೆ 2018-19ನೇ ವರ್ಷದಲ್ಲಿ ವರ್ಗಾವಣೆಗೊಂಡ ಪದವಿ-ಪೂರ್ವ ಕಾಲೇಜಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಉಪನ್ಯಾಸಕರ ಸಂದರ್ಭದಲ್ಲಿ, ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ಶಿಕ್ಷಕರ ವರ್ಗಾವಣೆ ನಿಯಂತ್ರಣ) (ಎರಡನೇ ತಿದ್ದುಪಡಿ) ಅಧಿನಿಯಮ, 2021ರ ಪ್ರಾರಂಭದ ದಿನಾಂಕದ ನಿಕಟ ತರುವಾಯ ಮಾಡಿದ ವರ್ಗಾವಣೆಯಲ್ಲಿ, ಜ್ಯೇಷ್ಠತಾ ಘಟಕದೊಳಗೆ ಸ್ಥಳನಿಯುಕ್ತಿಯ ಪ್ರಯೋಜನವನ್ನು ನೀಡುವುದಕ್ಕಾಗಿ, ಮುಂಬರುವ ಇತರ ರೀತಿಯ ವರ್ಗಾವಣೆಗಳಿಗೆ ಖಾಲಿ ಹುದ್ದೆಗಳ ಲಭ್ಯತೆಗೆ ಒಳಪಟ್ಟು ಅವರು ಕಾರ್ಯನಿರ್ವಹಿಸುತ್ತಿರುವ ಜ್ಯೇಷ್ಠತಾ ಘಟಕದೊಳಗೆ ಒಂದು ಸಲದ ಕ್ರಮವಾಗಿ (one time measure) ನಿಯಮಿಸಬಹುದಾದಂತಹ ರೀತಿಯಲ್ಲಿ ವರ್ಗಾವಣೆಯ ಸ್ಥಳವನ್ನು ಆಯ್ಕೆಮಾಡಲು ಅವಕಾಶವನ್ನು ಸಹ ಒದಗಿಸತಕ್ಕದ್ದು.

**XXX XXX XXX**

**ಅನುಸೂಚಿ-I**
**(2 ಮತ್ತು 16ನೇ ಪ್ರಕರಣ ನೋಡಿ)**

| ಕ್ರಮ ಸಂಖ್ಯೆ | ಶಿಕ್ಷಕರ ವೃಂದ |
|---|---|
| I | **ಸರ್ಕಾರಿ ಪ್ರಾಥಮಿಕ ಶಾಲೆ ಅಥವಾ ಪದವಿ- ಪೂರ್ವ ಕಾಲೇಜುಗಳಲ್ಲಿನ ಹುದ್ದೆಗಳು** |
| 1. | ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಅಥವಾ ಪದವಿ- ಪೂರ್ವ ಕಾಲೇಜಿನಲ್ಲಿ ಮುಖ್ಯೋಪಾಧ್ಯಾಯ/ ಮುಖ್ಯೋಪಾಧ್ಯಾಯಿನಿ |
| 2 | ಮಾದರಿ ಹಿರಿಯ ಪ್ರಾಥಮಿಕ ಶಾಲೆ ಅಥವಾ ಪದವಿ- ಪೂರ್ವ ಕಾಲೇಜು/ ಹಿರಿಯ ಪ್ರಾಥಮಿಕ ಶಾಲೆ ಅಥವಾ ಪದವಿ- ಪೂರ್ವ ಕಾಲೇಜಿನಲ್ಲಿ ಹಿರಿಯ ಮುಖ್ಯೋಪಾಧ್ಯಾಯ/ ಮುಖ್ಯೋಪಾಧ್ಯಾಯಿನಿ |
| 3 | ಪ್ರಾಥಮಿಕ ಶಾಲೆ ಅಥವಾ ಪದವಿ- ಪೂರ್ವ ಕಾಲೇಜು ಸಹಾಯಕ ಉಪಾಧ್ಯಾಯ/ ಉಪಾಧ್ಯಾಯಿನಿ ಈ ಮುಂದಿನ ಪ್ರವರ್ಗಗಳನ್ನು ಒಳಗೊಂಡಿರುತ್ತದೆ:<br>(i) ಪ್ರಾಥಮಿಕ ಶಾಲೆ ಅಥವಾ ಪದವಿ- ಪೂರ್ವ ಕಾಲೇಜು ಶಿಕ್ಷಕರು (1 ರಿಂದ 5ನೇ ತರಗತಿವರೆಗೆ)<br>(ii) ಪದವೀಧರ ಪ್ರಾಥಮಿಕ ಶಿಕ್ಷಕರು (6 ರಿಂದ 8ನೇ ತರಗತಿವರೆಗೆ) |
| 4 | ಸಂಗೀತ ಶಿಕ್ಷಕ |
| 5 | ದೈಹಿಕ ಶಿಕ್ಷಣ ಶಿಕ್ಷಕ |
| 6 | ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಅಥವಾ ಪದವಿ- ಪೂರ್ವ ಕಾಲೇಜು/ಮಾದರಿ ಹಿರಿಯ ಪ್ರಾಥಮಿಕ ಶಾಲೆ ಅಥವಾ ಪದವಿ- ಪೂರ್ವ ಕಾಲೇಜಿನಲ್ಲಿ ಚಿತ್ರಕಲೆ ಶಿಕ್ಷಕ/ ಯಾವುದೇ ಇತರ ವಿಶೇಷ ಶಿಕ್ಷಕರು |
| II | **ಸರ್ಕಾರಿ ಪ್ರೌಢ ಶಾಲೆ ಅಥವಾ ಪದವಿ- ಪೂರ್ವ ಕಾಲೇಜು][1]ಗಳಲ್ಲಿನ ಹುದ್ದೆಗಳು:** |
| 1. | ಸರ್ಕಾರಿ ಹಿರಿಯ ಪ್ರಾಥಮಿಕ / ವಿವಿಧೋದ್ದೇಶ ಪ್ರೌಢ ಶಾಲೆ ಅಥವಾ ಪದವಿ- ಪೂರ್ವ ಕಾಲೇಜಿನ ಮುಖ್ಯೋಪಾಧ್ಯಾಯ/ ಮುಖ್ಯೋಪಾಧ್ಯಾಯಿನಿ ಮತ್ತು ಸರ್ಕಾರಿ ಪ್ರೌಢ ಶಾಲೆ ಅಥವಾ ಪದವಿ- ಪೂರ್ವ ಕಾಲೇಜಿನ ಮುಖ್ಯೋಪಾಧ್ಯಾಯ/ ಮುಖ್ಯೋಪಾಧ್ಯಾಯಿನಿ/ ಸಂಯೋಜಿತ ಪದವಿ ಪೂರ್ವ ಕಾಲೇಜು/ ಕರ್ನಾಟಕ ಪಬ್ಲಿಕ್ ಶಾಲೆ ಅಥವಾ ಪದವಿ- ಪೂರ್ವ ಕಾಲೇಜು/ ಸಂಯೋಜಿತ ಪ್ರೌಢ ಶಾಲೆ ಅಥವಾ ಪದವಿ- ಪೂರ್ವ ಕಾಲೇಜಿನ ಉಪ ಪ್ರಾಂಶುಪಾಲರನ್ನೂ ಒಳಗೊಂಡಂತೆ ಯಾವುದೇ ಹೆಸರಿನಿಂದ ಕರೆಯಲಾಗುವ ಸರ್ಕಾರಿ ಪ್ರೌಢ ಶಾಲೆ ಅಥವಾ ಪದವಿ- ಪೂರ್ವ ಕಾಲೇಜುಗಳ ಮುಖ್ಯೋಪಾಧ್ಯಾಯ/ ಮುಖ್ಯೋಪಾಧ್ಯಾಯಿನಿ, ಇದು ಈ ಮುಂದಿನ ಹುದ್ದೆಗಳ ಪ್ರವರ್ಗಗಳನ್ನು ಒಳಗೊಳ್ಳುವುದು |
| 2 | ಸೆಕೆಂಡರಿ ಶಾಲೆ ಅಥವಾ ಪದವಿ- ಪೂರ್ವ ಕಾಲೇಜು ಸಹಾಯಕ (ಗ್ರೇಡ್-I) |
| 3. | ಸೆಕೆಂಡರಿ ಶಾಲೆ ಅಥವಾ ಪದವಿ- ಪೂರ್ವ ಕಾಲೇಜು ಸಹಾಯಕ (ಗ್ರೇಡ್-II) |
| 4. | ಈ ಮುಂದಿನ ಹುದ್ದೆಗಳ ಪ್ರವರ್ಗಗಳನ್ನು ಒಳಗೊಂಡಿರುವ ಸರ್ಕಾರಿ ಪ್ರೌಢ ಶಾಲೆ ಅಥವಾ ಪದವಿ- ಪೂರ್ವ ಕಾಲೇಜು, ಸಂಯೋಜಿತ ಪದವಿ-ಪೂರ್ವ ಕಾಲೇಜು, ಸಂಯೋಜಿತ ಪ್ರೌಢ ಶಾಲೆ ಅಥವಾ |

| | |
|---|---|
| | ಪದವಿ- ಪೂರ್ವ ಕಾಲೇಜಿನಲ್ಲಿ ಪದವೀಧರ ಸಹಾಯಕ ಉಪಾಧ್ಯಾಯ/ ಉಪಾಧ್ಯಾಯಿನಿ, ಎಂದರೆ:-<br>(i) ಕನ್ನಡ, ಇಂಗ್ಲೀಷ್, ಉರ್ದು, ಹಿಂದಿ, ಮರಾಠಿ, ತಮಿಳು ಮತ್ತು ತೆಲುಗು ಕಲಿಕಾ ಮಾಧ್ಯಮಗಳಲ್ಲಿ ಕಲಾ ಸಹಾಯಕ ಉಪಾಧ್ಯಾಯ;<br>(ii) ಕನ್ನಡ, ಇಂಗ್ಲೀಷ್, ಉರ್ದು, ಹಿಂದಿ, ಮರಾಠಿ, ತಮಿಳು ಮತ್ತು ತೆಲುಗು ಕಲಿಕಾ ಮಾಧ್ಯಮಗಳಲ್ಲಿ ದೈಹಿಕ ವಿಜ್ಞಾನದಲ್ಲಿ ಸಹಾಯಕ ಉಪಾಧ್ಯಾಯ;<br>(iii) ಕನ್ನಡ, ಇಂಗ್ಲೀಷ್, ಉರ್ದು, ಹಿಂದಿ, ಮರಾಠಿ, ತಮಿಳು ಮತ್ತು ತೆಲುಗು ಕಲಿಕಾ ಮಾಧ್ಯಮಗಳಲ್ಲಿ ಜೀವಶಾಸ್ತ್ರ ವಿಜ್ಞಾನದಲ್ಲಿ ಸಹಾಯಕ ಉಪಾಧ್ಯಾಯ,<br>(iv) ಕನ್ನಡ, ಇಂಗ್ಲೀಷ್, ಉರ್ದು, ಹಿಂದಿ, ಮರಾಠಿ, ತಮಿಳು, ತೆಲುಗು ಮತ್ತು ಸಂಸ್ಕೃತ ಭಾಷೆಗಳಲ್ಲಿ ಭಾಷಾ ಸಹಾಯಕ. |
| 5. | ಸರ್ಕಾರಿ ಪ್ರೌಢ ಶಾಲೆ ಅಥವಾ ಪದವಿ- ಪೂರ್ವ ಕಾಲೇಜುಗಳು ಮತ್ತು ಸಂಯೋಜಿತ ಪದವಿ- ಪೂರ್ವ ಕಾಲೇಜುಗಳಲ್ಲಿ ದೈಹಿಕ ಶಿಕ್ಷಣ ಶಿಕ್ಷಕ |
| 6. | ನಾಟಕ ಶಿಕ್ಷಕ |
| 7. | ನೃತ್ಯ ಶಿಕ್ಷಕ |
| 8. | ಚಿತ್ರಕಲೆ ಶಿಕ್ಷಕ |
| 9. | ಸಂಗೀತ ಶಿಕ್ಷಕ |
| 10. | ಎಲ್ಲಾ ವಿಶೇಷ ಶಿಕ್ಷಕರು |

**XXX XXX XXX**

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ, ಬೆಂಗಳೂರು, ಕಾಸೂ , ಪ್ರತಿಗಳು 300, 24ನೇ ಮಾರ್ಚ್ 2026